# ವೈಟ್ ಕಿಡ್ ಕುಲುಮ್

‘ಬೆಂಗಳೂರು ನಗರದಲ್ಲಿ ಒಂದಲ್ಲ ಒಂದು ಕಡೆ ಕಟ್ಟಡ ಕಾಮಗಾರಿ ನಡೆಯುತ್ತಲೇ ಇರುತ್ತದೆ. ಈ ಕಟ್ಟಡ ಕಾಮಗಾರಿ ಇಲ್ಲಿ ನಿತ್ಯದ ವಿದ್ಯಮಾನ. ಒಮ್ಮೆ ಎಲ್ಲ ಕಟ್ಟಡಗಳು ನಿರ್ಮಾಣ ಆಗಿ ಮುಗಿದು ಬಿಟ್ಟರೆ ಬೆಂಗಳೂರು ‘ಗಾರ್ಡನ್ ಸಿಟಿ’ ಹೋಗಿ ‘ಕಾಂಕ್ರೀಟ್ ಸಿಟಿ’ ಖಂಡಿತಾ ಆಗುತ್ತದೆ’




ದಕ್ಷಿಣ ಆಫ್ರಿಕಾದಿಂದ ಬಂದ ಕೆಮರೂನ್ ಸ್ವಿವಾಂಟನ್, ಚಾರ್ಮಿನ್ ದಂಪತಿ ಮಕ್ಕಳಾದ ಕೀಗನ್ ಮತ್ತು ಕುಲುಮ್ ಅವರೊಂದಿಗೆ.

ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಎರಡು ವರ್ಷಗಳ ಹಿಂದೆ ಬಂದ ಕೆಮರೂನ್, ಇಲ್ಲಿನ ಕಟ್ಟಡ ಕಾಮಗಾರಿಯ ಬಗ್ಗೆ ಹೆಚ್ಚಿನ ಆಸಕ್ತಿ ತಳೆದಿದ್ದಾರೆ. ತಮ್ಮ ದೇಶಕ್ಕೂ ಇಲ್ಲಿಗೂ ಕಟ್ಟಡ ನಿರ್ಮಾಣ ವಿಚಾರದಲ್ಲಿ ಸಾಕಷ್ಟು ವ್ಯತ್ಯಾಸವಿರುವುದನ್ನು ಅವರು ಗಮನಿಸಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಹೆಚ್ಚಿನ ಕೆಲಸಗಳು ಮೆಷಿನ್ ಆಧಾರಿತ ಆಗಿವೆ. ಆದರೆ ಇಲ್ಲಿ ಕಾರ್ಮಿಕರ ಮೂಲಕವೇ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದೆ. ಅತ್ಯಾಧುನಿಕ ಯಂತ್ರೋಪಕರಣಗಳ ಬಳಕೆ ಇಲ್ಲಿ ಕಡಿಮೆ. ಇದರಿಂದ ಕಟ್ಟಡ ಕಾರ್ಮಿಕರಿಗೆ ಕೆಲಸ ದೊರೆಯುತ್ತದಾದರೂ ಕಾಮಗಾರಿ ನಿಧಾನವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ ಕೆಮರೂನ್.

ಕೆಮರೂನ್ ಕಟ್ಟಡ ಕಾಮಗಾರಿ ಬಗ್ಗೆ ಹೆಚ್ಚು ಆಸಕ್ತರಾಗಲು ಪ್ರಮುಖ ಕಾರಣ ಅವರು ಇದೇ ಕ್ಷೇತ್ರದಲ್ಲಿ ಉದ್ಯೋಗ ಮಾಡುತ್ತಿರುವುದು. ಲ್ಯಾಂಡ್ ಡೆವಲಪಿಂಗ್ ಕಂಪೆನಿಯೊಂದರಲ್ಲಿ ಕೆಮರೂನ್ ಮಾನವ ಸಂಪನ್ಮೂಲ ಅಧಿಕಾರಿ. ಪತ್ನಿ ಚಾರ್ಮಿನ್ ಮತ್ತು ಮಕ್ಕಳಾದ ಕೀಗನ್ ಮತ್ತು ಕುಲುಮ್ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಇಲ್ಲಿ ನೆಲೆ ನಿಂತವರು. ಸದ್ಯ ಬೆಂಗಳೂರಿಗೆ ಈ ಕುಟುಂಬ ಚೆನ್ನಾಗಿ ಹೊಂದಿಕೊಂಡಿದೆ.

‘ಬೆಂಗಳೂರಿಗೆ ಬಂದ ಹೊಸದರಲ್ಲಿ ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಕಷ್ಟವಾಯಿತು. ಆದರೆ ಈಗ ಊಟ ತಿಂಡಿಯಿಂದ ಹಿಡಿದು ಎಲ್ಲವೂ ಚೆನ್ನಾಗಿದೆ ಅನಿಸ್ತಾ ಇದೆ. ಇನ್ನೂ ಕೆಲವು ವರ್ಷಗಳ ಕಾಲ ಬೆಂಗಳೂರಿನಲ್ಲೇ ಇರುವ ಯೋಚನೆಯಿದೆ’ ಎನ್ನುವ ಕೆಮರೂನ್,

‘ದಕ್ಷಿಣ ಆಫ್ರಿಕಾದಲ್ಲಿ ಜನರ ಮಧ್ಯೆ ಸೌಹಾರ್ದ ಸಂಬಂಧವಿಲ್ಲ. ಆದರೆ ಇಲ್ಲಿ ನಾವು ಬೇರೆ ದೇಶದಿಂದ ಬಂದಿದ್ದರೂ ನಮ್ಮನ್ನು ಚೆನ್ನಾಗಿ ಮಾತನಾಡಿಸುತ್ತಾರೆ, ಇಲ್ಲಿಯವರ ಹಾಗೇ ಟ್ರೀಟ್ ಮಾಡುತ್ತಾರೆ. ಇದರಿಂದ ನಮಗೆ ನಿಜವಾಗಿಯೂ ಖುಷಿಯಾಗಿದೆ’ ಎನ್ನುತ್ತಾರೆ.

‘ನಗರದಲ್ಲಿ ವಿಪರೀತ ಟ್ರಾಫಿಕ್. ಜತೆಗೆ ಕೆಲವು ಭಾಗಗಳು ಸ್ವಚ್ಛವಾಗಿಲ್ಲ. ಇನ್ನೂ ಕೆಲವು ಬಡಾವಣೆಗಳ ರಸ್ತೆಗಳಲ್ಲಿ ನಡೆದಾಡಿದರೆ ಈ ಅನುಭವ ಆಗುತ್ತದೆ. ಅಲ್ಲದೆ ನಗರದಲ್ಲಿ ಒಂದಲ್ಲ ಒಂದು ಕಡೆ ಕಟ್ಟಡ ಕಾಮಗಾರಿ ನಡೆಯುತ್ತಲೇ ಇರುತ್ತದೆ. ಪ್ರತಿನಿತ್ಯ ಈ ಕಟ್ಟಡ ಕಾಮಗಾರಿಗಳನ್ನು ವೀಕ್ಷಿಸುತ್ತಿದ್ದೇವೆ. ಒಮ್ಮೆ ಎಲ್ಲ ಕಟ್ಟಡಗಳು ಆಗಿ ಮುಗಿದು ಬಿಟ್ಟರೆ ಬೆಂಗಳೂರು ‘ಗಾರ್ಡನ್ ಸಿಟಿ’ ಹೋಗಿ ‘ಕಾಂಕ್ರೀಟ್ ಸಿಟಿ’ ಖಂಡಿತಾ ಆಗುತ್ತದೆ’ ಎಂದು ಹೇಳುತ್ತಾರೆ ಇವರು.

‘ಮುಖ್ಯ ಭಾಗಗಳಲ್ಲಿ ಬಿಟ್ಟರೆ ಉಳಿದೆಡೆ ರಸ್ತೆಗಳೂ ಹದಗೆಟ್ಟಿವೆ. ವಿಪರೀತ ಜನದಟ್ಟಣೆ. ಅಲ್ಲದೆ ರಸ್ತೆ ಹೊಂಡಗಳಿಂದಾಗಿ ಬೆಂಗಳೂರು ನಗರದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದನ್ನು ಗಮನಿಸಿದ್ದೇನೆ. ಇತ್ತೀಚೆಗೆ ಅಪರಾಧಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಆದರೂ ಇಲ್ಲಿ ಸುರಕ್ಷತೆಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ ಎಂಬುದು ಸಮಾಧಾನದ ವಿಷಯ. ಸಿಸಿ ಟಿವಿಗಳ ಅಳವಡಿಕೆ, ವಿಶೇಷ ಸಂದರ್ಭಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸುವುದು, ಸಂಚಾರಿ ಪೊಲೀಸರು ಪರಿಸ್ಥಿತಿಯ ನಿಯಂತ್ರಣಕ್ಕೆ ಸಹಕರಿಸುವುದು, ಸೆಕ್ಯೂರಿಟಿ ಗಾರ್ಡ್‌ಗಳನ್ನು ಅಪಾರ್ಟ್‌ಮೆಂಟ್, ಬಹುಮಹಡಿ ಕಟ್ಟಡಗಳಿಗೆ ಭದ್ರತೆಗಾಗಿ ನಿಯೋಜಿಸಿರುವುದು ಅಪರಾಧ ತಡೆಗೆ ನಡೆಸುವ ಪ್ರಯತ್ನವೇ ಆಗಿದೆ ಎಂಬುದನ್ನು ನಾವು ಗುರುತಿಸಿದ್ದೇವೆ’ ಎನ್ನುತ್ತಾರೆ ಕೆಮರೂನ್ ಅವರ ಪತ್ನಿ ಚಾರ್ಮಿನ್.

## ವಿಭಿನ್ನ ಸಂಪ್ರದಾಯ

‘ಇಲ್ಲಿನ ಸಂಸ್ಕೃತಿ, ಸಂಪ್ರದಾಯ ವಿಭಿನ್ನವಾಗಿದೆ. ಇಲ್ಲಿನ ಜನ ಸ್ನೇಹಪರರು, ಜತೆಗೆ ಯಾವುದೇ ಸಮಯದಲ್ಲೂ ತಮ್ಮ ಸಹಾಯಹಸ್ತ ಚಾಚುತ್ತಾರೆ. ಬೆಂಗಳೂರಿಗೆ ಬಂದ ಹೊಸತರಲ್ಲಿ ನಮಗೆ ಅನೇಕರು ತುಂಬ ಸಹಾಯ ಮಾಡಿದರು. ಇದನ್ನು ನಾವು ಸದಾ ನೆನೆಯುತ್ತೇವೆ’ ಎನ್ನುತ್ತಾರೆ ಈ ದಂಪತಿ.

ಇಲ್ಲಿನ ಊಟ ತಿಂಡಿಗಳಂತೂ ಬಹಳ ರುಚಿಯಾಗಿರುತ್ತವೆ. ಬಿರಿಯಾನಿ ನಮಗಿಷ್ಟ. ದಕ್ಷಿಣ ಆಫ್ರಿಕಾದಲ್ಲಿ ತಯಾರಿಸುವ ಬಿರಿಯಾನಿ ಇಲ್ಲಿಗಿಂತ ಹೆಚ್ಚು ಮಸಾಲೆಯುಕ್ತವಾಗಿರುತ್ತದೆ. ರುಚಿಯಲ್ಲೂ ವ್ಯತ್ಯಾಸವಿದೆ. ನಮಗೆ ಇಲ್ಲಿಯ ಚಿಕನ್ ಬಿರಿಯಾನಿಯೇ ಇಷ್ಟ. ಜತೆಗೆ ಅಪ್ಪಂ, ದೋಸೆಗಳೂ ಚೆನ್ನಾಗಿರುತ್ತವೆ. ಮಕ್ಕಳು ಇಲ್ಲಿಯ ಶಾಲೆಯಲ್ಲಿ ಓದುತ್ತಿದ್ದಾರೆ. ಚಿಕ್ಕ ಮಗ ಕುಲುಮ್‌ಗೆ ಸ್ನೇಹಿತರ ದೊಡ್ಡ ದಂಡೇ ಇದ್ದು, ಎಲ್ಲರೂ ಅವನನ್ನು ‘ವೈಟ್ ಕಿಡ್’ ಎಂದೇ ಕರೆಯುತ್ತಾರಂತೆ. ಕುಲುಮ್‌ಗೂ ಸ್ನೇಹಿತರು ಹೀಗೆ ಕರೆಯುವುದು ಇಷ್ಟವಂತೆ.

★ ಅವನೀಶ್